**◆ ಮಕ್ಕಳ ಸಾಹಿತ್ಯದ ಗಂಭೀರ ಅಧ್ಯಯನ ಮತ್ತು ಸಂವಾದ ಸೀಮಿತವಾಗಲು ಕಾರಣ ಏನು?**

ಮಕ್ಕಳ ಸಾಹಿತ್ಯದಲ್ಲಿ ಕೆಲಸ ಮಾಡುವ ಕೆಲವರು ಬೇರೆ ಸಾಹಿತ್ಯ ಓದುವುದಿಲ್ಲ. ಅಂತೆಯೇ ಬೇರೆಯವರು ಮಕ್ಕಳಿಗೆ 'ಮಕ್ಕಳ ಸಾಹಿತ್ಯ' ಎಂದುಕೊಳ್ಳುತ್ತಾರೆ. ತುಂಬ ಜನರಿಗೆ ಓದಿನ ಕೊರತೆ ಇರುತ್ತದೆ. ಕೆಲವರು ಮಕ್ಕಳ ಸಾಹಿತ್ಯ ಮಕ್ಕಳಿಗೋಸ್ಕರ ಎಂದು ಭಾವಿಸುತ್ತಾರೆ. ಇಂಗ್ಲಿಷ್‌ನಲ್ಲಿ ತುಂಬ ಕೆಲಸ ಆಗಿದೆ. ಅಲ್ಲಿ ಚೈಲ್ಡ್ ಲಿಟರೇಚರ್ ಬೇರೆ, ಚಿಲ್ಡ್ರನ್ ಲಿಟರೇಚರ್ ಬೇರೆ. ಮಕ್ಕಳ ಸಾಹಿತ್ಯ ಬಾಲ್ಯಕ್ಕೆ ಸಂಬಂಧಿಸಿರುತ್ತದೆ. ಮಗು ಬರೆದ ಸಾಹಿತ್ಯ (ಚೈಲ್ಡ್ ಲಿಟರೇಚರ್) ಬೇರೆ. ಅದು ಏನು ಬರೆದಿದೆ ಎಂದು ಯೋಚಿಸಬೇಕು. ಮಗು ಏನೋ ಹೇಳುತ್ತಿದೆ ಎಂದು ತಕ್ಷಣ ಅದನ್ನು ಸಾಹಿತ್ಯ ಮಾಡುವ ಅಗತ್ಯವೂ ಇಲ್ಲ. ನಮ್ಮ ತಲೆಮಾರಿನ ಜನ ಅಪ್ಪ–ಅಮ್ಮ ಹೇಳಿದ ಕೆಲಸ ಯಾವತ್ತೂ ಮಾಡಿಲ್ಲ. ನಮಗೆ ಇಷ್ಟ ಬಂದಂತೆ ಆಡಿದ್ದೇವೆ, ಕುಣಿದಿದ್ದೇವೆ. ಅದು ಬಾಲ್ಯದ ಹಕ್ಕು, ಪೋಷಕರು ಮಕ್ಕಳ ಹಕ್ಕನ್ನು ಕಿತ್ತುಕೊಳ್ಳಬಾರದು. ಈ ಕಾಳಜಿ ಮುಖ್ಯಧಾರೆಯಲ್ಲಿ ಇಲ್ಲದೆ ಇರುವುದರಿಂದ ಮಕ್ಕಳ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಪಿಎಚ್‌ಡಿ ಮಾಡುವ ಸಂದರ್ಭದಲ್ಲಿ 'ಒಂದು ಲೇಖನ ಬರೆಯಬಹುದು ಅಷ್ಟೇ' ಎನ್ನುವ ಮಾತನ್ನು ಕೇಳಿದ್ದೆ. 'ಮಕ್ಕಳ ಕಥನ ಸಾಹಿತ್ಯದಲ್ಲಿ ಫ್ಯಾಂಟಸಿಯ ಸ್ವರೂಪ' ಎಂದು ಅಧ್ಯಯನ ಮಾಡಿದೆ.

**◆ ರಚನೆ, ವಿನ್ಯಾಸದ ಹಿನ್ನೆಲೆಯಲ್ಲಿ ನೋಡಿದಾಗ ಮಕ್ಕಳ ಸಾಹಿತ್ಯದ ಸವಾಲು ಏನಾಗಿರುತ್ತದೆ?**

ಯಾವತ್ತೂ ನಾವು ಕಥೆ–ಕಾವ್ಯ–ಕಾದಂಬರಿ ರಚನೆಕಾರರಿಗೆ ಸವಾಲು ಕೇಳುವುದಿಲ್ಲ. ಕಥೆ–ಕವಿತೆ ಲೇಖಕನ ಒಳಗಿನಿಂದ ಬರುತ್ತದೆ. ದೊಡ್ಡವರು ಮಕ್ಕಳ ಬಗ್ಗೆ ಬರೆದಾಗ, ಅವರ ಮಟ್ಟಕ್ಕೆ ಇಳಿದು ಬರೆಯಬೇಕು, ಸುಲಭದ್ದಲ್ಲ ಎನ್ನುತ್ತಾರೆ. ನನ್ನೊಳಗೆ ಬಾಲ್ಯ ಇದೆ. ಅದನ್ನು ಹೇಳಲು ಕಷ್ಟವೂ ಅಲ್ಲ, ಶ್ರಮವೂ ಅಲ್ಲ. ಸಹಜವಾದ ಅಭಿವ್ಯಕ್ತಿ. ನನ್ನ ಬಾಲ್ಯದ ಅನುಭವಗಳನ್ನು ಈ ಕಾಲಘಟ್ಟದ ಮಕ್ಕಳ ಅನುಭವದೊಂದಿಗೆ ಬೆಸೆದು ಕಲಾತ್ಮಕವಾಗಿ ಬರೆಯುತ್ತಿದ್ದೇನೆ. ಇದು ಯಾವುದೇ ರೀತಿಯ ಒತ್ತಡ, ಒತ್ತಾಯ, ಸವಾಲಿನ ಕೆಲಸ ಅಲ್ಲ. ಯಾರನ್ನಾದರೂ ಉದ್ದೇಶವಾಗಿ ಇಟ್ಟುಕೊಂಡು ಬರೆಯಲು ಹೋದಾಗ ಸವಾಲು ಎದುರಾಗುತ್ತದೆ.

**◆ 'ನೋಟ್‌ಬುಕ್' ಆಲಿಸುವ, ನೋಡುವ, ಓದುವ ಸ್ವರೂಪ ಇದೆ. ಇದರ ಹಿಂದಿನ ಉದ್ದೇಶ ಏನಾಗಿತ್ತು?**

ಬಾಲ್ಯದಲ್ಲಿ ನಾನು ಓದಿದ ಚಂದಮಾಮ, ಬಾಲಮಿತ್ರ ಕಥೆಗಳನ್ನು ಕಲರ್‌ಫುಲ್ ಪುಸ್ತಕದಲ್ಲಿ ನೋಡಿ ಆನಂದಿಸಿದ್ದೆ. ಸಾಹಿತ್ಯಕ್ಕೆ ಆಕರ್ಷಿತನಾಗಲು ಅದೇ ಕಾರಣ. ಪ್ರಕಾಶಕನಾಗಿ ಅದರ ಕಷ್ಟ ಸುಖ ಏನು ಅನ್ನುವುದೂ ಗೊತ್ತು. ಈ ಪುಸ್ತಕವನ್ನು ಪ್ರಯೋಗಾತ್ಮಕವಾಗಿ ಮಾಡಬೇಕು ಎಂದು ನಿರ್ಧರಿಸಿದೆ. ಮಕ್ಕಳೂ ತಂತ್ರಜ್ಞಾನವನ್ನು ಬಳಸುತ್ತಿದ್ದಾರೆ. ಅಲ್ಲಿ ನನ್ನ ಕಥೆಯನ್ನು ಓದಬಹುದಾ ಎನ್ನುವ ದೃಷ್ಟಿಯಲ್ಲಿ ಮಾಡಿದಾಗ ಕ್ಯೂಆರ್ ಕೋಡ್ ಹುಟ್ಟಿಕೊಂಡಿತು. ಮೊದಲು ಕಥೆ ಕೇಳಿದವರು ಓದಲು ಆರಂಭಿಸಲಿ. ಕನ್ನಡ ಓದಲು ಬಾರದ ಮಕ್ಕಳು ಸಂಪರ್ಕಕ್ಕೆ ಬರಲಿ. ಯೂಟ್ಯೂಬ್‌ನಲ್ಲಿಯೇ ಕಥೆ ಬಂದರೆ, ಆಸಕ್ತಿಯಿಂದ ಮೂಲ ಕಥೆ ಓದಬಹುದು ಎಂಬ ಭಾವನೆಯಿಂದ ಪ್ರತಿ ಪುಟ ಬಣ್ಣದಿಂದ ಮಾಡಿದೆ. ಮಕ್ಕಳ ಸಾಹಿತ್ಯಕ್ಕೆ ಒಳ್ಳೆಯ ಮಾರುಕಟ್ಟೆ ಇದೆ. ಅದನ್ನು ಬಳಸಿ ರಿಯಾಯಿತಿ ದರದಲ್ಲಿ ಮಾರುವ ಅವಕಾಶವೂ ಇದೆ. ಲೇಖಕರೇ ಪ್ರಕಾಶಕರೂ ಆಗುತ್ತಿದ್ದಾರೆ. ಮಾರುಕಟ್ಟೆಯ ದೃಷ್ಟಿಯಿಂದ ಕಂಟೆಂಟ್‌ನಷ್ಟೇ ವಿನ್ಯಾಸ, ಸೌಂದರ್ಯವೂ ಮುಖ್ಯ. ನೋಡುವುದಕ್ಕೂ ಚಂದ ಅನ್ನಿಸಬೇಕು. ಅದು ಗುಣಮಟ್ಟದ ಭಾಗವಾದಾಗಲೇ ಸೊಗಸಾಗಿ ಕಾಣಿಸುತ್ತದೆ. ಸುಂದರವಾಗಿ ಕೊಟ್ಟಾಗ ಪುಸ್ತಕ ಗೆಲುವಿಗೂ ಒಂದು ಮಾನದಂಡ ಆಗುತ್ತದೆ. ಪುಸ್ತಕ ಪ್ರಾಧಿಕಾರದ 'ಪುಸ್ತಕ ಸೊಗಸು' ಬಹುಮಾನ ಈ ಕೃತಿಗೆ ಬಂತು. ಸಾಕಷ್ಟು ಮಂದಿ ಪುಸ್ತಕದ ಸೌಂದರ್ಯ ನೋಡಿಯೇ ತೆಗೆದುಕೊಳ್ಳುತ್ತಾರೆ. ■


## ಯುಗಾದಿ ಬಂದರೆ ಪ್ರಬಂಧಗಳಿಗೆ ಸುಗ್ಗಿ ಕಾಲ

# ಸುಧಾ

## ಯುಗಾದಿ ವಿಶೇಷಾಂಕ-2026

ಯುಗಾದಿ ಬಂದರೆ ಪ್ರಬಂಧಗಳಿಗೆ ಸುಗ್ಗಿ ಕಾಲ. 2026ರ 'ಸುಧಾ' ಯುಗಾದಿ ವಿಶೇಷಾಂಕಕ್ಕಾಗಿ ಲಲಿತಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿದೆ. ಸೃಜನಶೀಲ ಲೇಖಕರು ತಮ್ಮ ಚಿಂತನೆಯ ಲಾಲಿತ್ಯಪೂರ್ಣ ಬರಹವನ್ನು ಕಳಿಸಬಹುದು. ವಿಷಯ, ವಸ್ತು, ನಿರೂಪಣೆಯಲ್ಲಿ ಹೊಸತನವನ್ನು ಈ ಸ್ಪರ್ಧೆ ನಿರೀಕ್ಷಿಸುತ್ತದೆ.

**ಮೊದಲನೇ ಬಹುಮಾನ: ₹20,000**

**ಎರಡನೇ ಬಹುಮಾನ: ₹15,000**

**ಮೂರನೇ ಬಹುಮಾನ: ₹10,000**

- ಪ್ರಬಂಧಗಳು 2000 ಶಬ್ದ ಮೀರದಿರಲಿ.
- ಪ್ರಬಂಧಕ್ಕೆ ನಿರ್ದಿಷ್ಟ ವಸ್ತುವಿನ ಕಟ್ಟುಪಾಡಿಲ್ಲ. ಯಾವ ವಿಷಯದ ಬಗ್ಗೆಯಾದರೂ ಪ್ರಬಂಧ ಬರೆಯಬಹುದು.
- ಸ್ಪರ್ಧೆಗೆ ಕಳುಹಿಸುವ ಪ್ರಬಂಧಗಳು ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಜಾಲತಾಣ, ಸಾಮಾಜಿಕ ಜಾಲತಾಣ ಸೇರಿದಂತೆ ಯಾವುದೇ ಮಾಧ್ಯಮದಲ್ಲಿ ಈ ಮೊದಲು ಪ್ರಕಟಗೊಂಡಿರಬಾರದು.
- ಬರಹದ ಜೊತೆಯಲ್ಲಿ ಪ್ರತ್ಯೇಕ ಹಾಳೆಯಲ್ಲಿ ವಿಳಾಸ, ದೂರವಾಣಿ ಸಂಖ್ಯೆ ಬರೆಯಿರಿ. ಜೊತೆಗೆ ನಿಮ್ಮ ಫೋಟೊ ಕೂಡ ಇರಲಿ.
- ಲಕೋಟೆ ಮೇಲೆ ಅಥವಾ ಇಮೇಲ್‌ನಲ್ಲಿ 'ಯುಗಾದಿ ಪ್ರಬಂಧ ಸ್ಪರ್ಧೆಗೆ' ಎಂದು ನಮೂದಿಸಿ.
- ಬಹುಮಾನಿತ ರಚನೆಗಳನ್ನು ಯಾವಾಗ ಬೇಕಾದರೂ ಯಾವ ಸ್ವರೂಪದಲ್ಲಾದರೂ ಬಳಸುವ ಹಕ್ಕನ್ನು 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಕಾದಿರಿಸಿಕೊಂಡಿದೆ.
- 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಸಿಬ್ಬಂದಿ ಮತ್ತು ಅವರ ಕುಟುಂಬ ವರ್ಗದವರು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.
- ನುಡಿ–ಯುನಿಕೋಡ್‌ನಲ್ಲಿ ಪ್ರಬಂಧಗಳನ್ನು ಇ–ಮೇಲ್ ಮಾಡಬಹುದು.

ಕೊನೆಯ ದಿನಾಂಕ
**ಡಿಸೆಂಬರ್ 25, 2025**

ವಿಳಾಸ: ಸಂಪಾದಕರು,
**ಸುಧಾ ಯುಗಾದಿ ವಿಶೇಷಾಂಕ,**
ನಂ. 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು 560001

ಇ–ಮೇಲ್: **ugadi@sudha.co.in**